### ಪೋಷಕರೇ ಗಮನಿಸಿ

# ಹದಿಹರೆಯದ ಮಕ್ಕಳ ನಿಯಂತ್ರಣ

ಇಂದಿನ ಯುವಜನಾಂಗವು ಜಗತ್ತಿನ ಇತಿಹಾಸದಲ್ಲಿಯೇ ಅತ್ಯಂತ ಭರವಸೆ ಮೂಡಿಸುವ ಪೀಳಿಗೆಯೆಂದು ಪರಿಗಣಿತವಾಗಿದೆ. ಅವರ ಮುಂದೆ ಎರಡು ದಾರಿಗಳಿವೆ: **ಒಂದು ವಿಶಾಲವಾದ ಮಾರ್ಗ.** ಆದರೆ ಅದು ಅವರನ್ನು ಸಾಧಾರಣ ಮಾನಸಿಕ ಸ್ತಿಮಿತದ ಮತ್ತು ಕಡಮೆ ದರ್ಜೆಯ ಚಾರಿತ್ರ್ಯದ ವ್ಯಕ್ತಿಗಳನ್ನಾಗಿ ರೂಪಿಸುತ್ತದೆ. **ಇನ್ನೊಂದು ಕಡಿದಾದ ಮಾರ್ಗ.** ಆ ಮಾರ್ಗದಲ್ಲಿ ಬಹಳ ಜನ ಪ್ರಯಾಣ ಮಾಡುವುದಿಲ್ಲ. ಆದರೆ ಅದು ನಮ್ಮನ್ನು ಮಾನವನು ಸಾಧಿಸಬಹುದಾದ ಅನಂತ ಸಾಧ್ಯತೆಗಳ ಕಡೆಗೆ ಕರೆದುಕೊಂಡು ಹೋಗುತ್ತದೆ. ಪೋಷಕರಾದ ನಾವು ಆ ದಾರಿಯ ಬಗ್ಗೆ ಮಾರ್ಗದರ್ಶನ ನೀಡಿದರೆ, ಪ್ರತಿಯೊಂದು ಮಗುವೂ ಅದನ್ನು ಆರಿಸಿಕೊಂಡು ಮುನ್ನಡೆಯಬಲ್ಲದು. ಪೋಷಕರಾದ ನಾವಲ್ಲದೆ ಬೇರೆ ಯಾರು ತಾನೇ ಈ ಬಗ್ಗೆ ಮಾರ್ಗದರ್ಶನ ನೀಡಲು ಸಾಧ್ಯ? ಇದರ ಬಗ್ಗೆ ಮಾರ್ಗದರ್ಶನವನ್ನು ಅವರು ಮನೆ ಅಥವಾ ಶಾಲೆಯಲ್ಲಲ್ಲದೆ, ಬೇರೆಲ್ಲಿ ತಾನೇ ಕಲಿತುಕೊಳ್ಳಲು ಸಾಧ್ಯ? ಅದನ್ನು ಈಗಲೇ ತುರ್ತಾಗಿ ಮಾಡಬೇಕಲ್ಲದೆ, ಇನ್ನಾವಾಗ ಅದು ಸಾಧ್ಯ?

ಹದಿಹರೆಯದ ಮಕ್ಕಳನ್ನು ನೋಡಿಕೊಳ್ಳುವುದು ಪೋಷಕರಿಗೆ ನಿಜವಾಗಿಯೂ ಒಂದು ದೊಡ್ಡ ಸವಾಲೇ ಸರಿ. ಅದು ಪೋಷಕರಲ್ಲಿನ ಉತ್ಕೃಷ್ಟತೆಯನ್ನು ಪ್ರಕಟಮಾಡುತ್ತದೆ. ಮಕ್ಕಳನ್ನಲ್ಲದೆ, ಪೋಷಕರನ್ನು ಕೂಡ ಉತ್ತಮ ವ್ಯಕ್ತಿಗಳಾಗಿ ರೂಪಿಸುತ್ತದೆ. ಆದರೆ ಪೋಷಕರು ಈ ಅವಧಿಯಲ್ಲಿ ಅತ್ಯಂತ ಹೆಚ್ಚಿನ ಒತ್ತಡವನ್ನು ತಾಳಿಕೊಳ್ಳಬೇಕಾಗುತ್ತದೆ. ಹದಿಹರೆಯದ ಮಕ್ಕಳ ಸಮಸ್ಯೆಯನ್ನು ನಾವು ಸರಿಯಾಗಿ ನಿಯಂತ್ರಿಸದಿದ್ದರೆ, ಅದು ಅವರ ಮನಸ್ಸಿನಲ್ಲಿ ಅಳಿಸಲಾಗದ ಗಾಸಿಯನ್ನು ಉಂಟುಮಾಡುತ್ತದೆ. ತಮ್ಮ ಜೀವನದುದ್ದಕ್ಕೂ ಅವರು ಇದರ ಸಲುವಾಗಿ ತಮ್ಮ ತಂದೆತಾಯಿಗಳ ಮೇಲೆ ದ್ವೇಷಭಾವನೆ ಬೆಳೆಸಿಕೊಳ್ಳುವ ಸಾಧ್ಯತೆ ಇರುತ್ತದೆ. ಆದ್ದರಿಂದ ಮಕ್ಕಳ ಜೀವನಕಾಲದ ಈ ಸಂಕೀರ್ಣ ಅವಧಿಯಲ್ಲಿ ನಾವು ಅವಶ್ಯವಾದ ಕ್ರಮಗಳನ್ನು, ಸರಿಯಾದ ದಿಕ್ಕಿನಲ್ಲಿ ತೆಗೆದುಕೊಳ್ಳುವುದು ಅತ್ಯಂತ ಮಹತ್ವವಾದುದು. ಅದನ್ನು ಹೇಗೆ ಮಾಡುವುದು?

**೧. ನಿಮ್ಮ ಮಗು ಈಗ ಬೆಳೆದು ನಿಂತಿದ್ದಾನೆ/ಳೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಿ.**

ನಿಮ್ಮ ಅಭಿಪ್ರಾಯಕ್ಕೆ ವಿರುದ್ಧವಾದ ನಿಲುವನ್ನು ಹೊಂದಿರುವ ಹಕ್ಕು ನಿಮ್ಮ ಮಗ/ಮಗಳಿಗೆ ಇದೆ ಎನ್ನುವ ಅಂಶವನ್ನು ಗೌರವಿಸಿರಿ: ಹದಿಹರೆಯವೆಂಬುದು ವ್ಯಕ್ತಿಯೊಬ್ಬನ ಬಾಳಿನಲ್ಲಿ ಒಂದು ವಿಶಿಷ್ಟವಾದ ಮತ್ತು ಕಠಿಣವಾದ ಘಟ್ಟ. ಈ ಹಂತದಲ್ಲಿ ಮಕ್ಕಳು ಹಲವಾರು ವಿಷಯಗಳಲ್ಲಿ ತಮ್ಮದೇ ಆದ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಲು ಆರಂಭಿಸುತ್ತಾರೆ. ಆದರೆ ಆ ವಿಷಯಗಳ ಬಗ್ಗೆ ಬಹಳ ಕಡಮೆ ತಿಳಿದಿರುತ್ತಾರೆ. ಅವುಗಳಲ್ಲಿ ಅವರಿಗೆ ತಿಳಿವಳಿಕೆಗಿಂತ ಅಜ್ಞಾನವೇ ಅಧಿಕವಾಗಿರುತ್ತದೆ. ಹಾಗೆಯೇ ಸಾಂಪ್ರದಾಯಿಕ ಧೋರಣೆಗಳ ವಿರುದ್ಧ ಸಿಡಿದೇಳುವ ಪ್ರವೃತ್ತಿಯನ್ನು ನಾವು ಅವರಲ್ಲಿ ಹೆಚ್ಚಾಗಿ ಕಾಣುತ್ತೇವೆ. ಹದಿಹರೆಯದ ಮಕ್ಕಳನ್ನು ನಿಯಂತ್ರಿಸುವುದೆಂದರೆ, ಹಗ್ಗದ ಮೇಲೆ ನಡೆದಂತೆ. ಯಾವ ನಿರ್ಧಾರವನ್ನು ತೆಗೆದುಕೊಂಡರೂ ಅದರಿಂದ ಇನ್ನಾವುದೋ ಆಪತ್ತು ಉಂಟಾಗುವುದೇ ಹೆಚ್ಚು. ಈ ಸಂಘರ್ಷದ ಅವಧಿಯಲ್ಲಿ ಮನಸ್ಸಿಗೆ ಉಂಟಾಗುವ ಗಾಯಗಳು ಮಗುವಿನ ಜೀವನದುದ್ದಕ್ಕೂ ಉಳಿದುಬಿಡುವ ಸಾಧ್ಯತೆಗಳಿವೆ. ಹಾಗೂ, ತಮ್ಮ ಪ್ರೌಢ ವಯಸ್ಸಿನಲ್ಲಿ ಅವರು ತಮ್ಮ ತಂದೆತಾಯಿಗಳೊಡನೆ ನಡೆದುಕೊಳ್ಳುವ ರೀತಿನೀತಿಗಳ ಮೇಲೆಯೂ ಇವು ಬಹಳ ಪರಿಣಾಮ ಬೀರುತ್ತವೆ. ಆದ್ದರಿಂದ ಹದಿಹರೆಯದ ಮಕ್ಕಳ ಅಭಿಪ್ರಾಯಕ್ಕೆ ಮನ್ನಣೆಕೊಟ್ಟು, ಅವರು ಹೇಳುವುದನ್ನು ಕಳಕಳಿಯಿಂದ ಕೇಳಿಕೊಳ್ಳುವುದು ಮತ್ತು ಅವರ ಕುಂದುಕೊರತೆಗಳನ್ನು ನಿವಾರಿಸಲು ಪ್ರಾಮಾಣಿಕವಾಗಿ ಪ್ರಯತ್ನಪಡುವುದು ಅತ್ಯಂತ ಮುಖ್ಯವಾದುದು. ಹಾಗೆಯೇ ವಯಸ್ಸಿಗೆ ಬಂದ ಮಕ್ಕಳು ವ್ಯಕ್ತಪಡಿಸುವ ಭಾವನೆಗಳಿಗೆ ಸಕಾರಾತ್ಮಕ ಪ್ರತಿಕ್ರಿಯೆಯನ್ನು ನೀಡುವುದನ್ನು ತಂದೆತಾಯಿಗಳು ಕಲಿಯಬೇಕು. ಮಕ್ಕಳ ಭಾವನೆಗಳಲ್ಲಿನ ದೋಷಗಳನ್ನು ಬಹಳ ಸಮಾಧಾನದ ಮನಸ್ಸಿನಿಂದ ತಿದ್ದುವುದಕ್ಕೆ ಪ್ರಯತ್ನಪಡಬೇಕು. ಹುಡುಗ ಎಲ್ಲಿ ಎಡುವುತ್ತಿದ್ದಾನೆ ಎನ್ನುವುದನ್ನು ತರ್ಕಬದ್ಧವಾಗಿ ಆತನಿಗೆ ಮನಗಾಣಿಸಲು ಯತ್ನಿಸಬೇಕು. ತಂದೆತಾಯಿಗಳು ಹೇಳುವುದು ತನ್ನ ಒಳ್ಳೆಯದಕ್ಕಾಗಿಯೇ ಎನ್ನುವುದು ಆತನ ಮನಸ್ಸಿನೊಳಗೆ ನಾಟುವಂತೆ ತಿಳಿಹೇಳಬೇಕು.

**೨. ಮನೋವೈದ್ಯರನ್ನು ಸಂದರ್ಶಿಸಿರಿ**

ನಿಮ್ಮ ಹದಿಹರೆಯದ ಮಕ್ಕಳನ್ನು ನಿಯಂತ್ರಿಸುವುದು ಅಸಾಧ್ಯವಾಗಿದೆಯೆಂದು ನಿಮಗೆ ಅನ್ನಿಸುತ್ತಿದ್ದರೆ ಶೀಘ್ರವಾಗಿ ಮನೋವೈದ್ಯರನ್ನು ಸಂದರ್ಶಿಸುವುದು ಒಳ್ಳೆಯದು. ನಿಮ್ಮ ಮತ್ತು ನಿಮ್ಮ ಮಗುವಿನ ನಡುವೆ ಮಾನಸಿಕ ಕಂದರ ಅಧಿಕವಾಗುತ್ತಿದ್ದರೆ, ಅದಕ್ಕಾಗಿ ಮಗುವನ್ನಷ್ಟೇ ದೂರುವುದು ಸರಿಯಲ್ಲ. ತಪ್ಪು ತಂದೆತಾಯಿಗಳದೂ ಇರಬಹುದು, ಮಗುವಿನದೂ ಇರಬಹುದು ಅಥವಾ ಇಬ್ಬರದೂ ಇರಬಹುದು. ಎಲ್ಲಕ್ಕಿಂತ ಮಿಗಿಲಾಗಿ ಸಂಬಂಧಗಳು 'ಅಹಂಕಾರದ ಸಮಸ್ಯೆ'ಯಿಂದ ಹಾಳಾಗುತ್ತವೆ. ಈ ವಿಪರೀತ ಪರಿಸ್ಥಿತಿಯಲ್ಲಿ ಮನೋವೈದ್ಯರ ಸಲಹೆ ಪಡೆಯುವುದು ಒಳ್ಳೆಯದು. ಅವರ ಮುಂದೆ ಎಲ್ಲ ಸಮಸ್ಯೆಗಳನ್ನೂ ಬಿಚ್ಚುಮನಸ್ಸಿನಿಂದ ಚರ್ಚೆಮಾಡಿ, ಪರಿಹಾರ ಪಡೆದುಕೊಳ್ಳುವುದು ಎಲ್ಲರಿಗೂ ಹಿತಕರ. ಮನೋವೈದ್ಯರು ದೋಷ ಯಾರಲ್ಲಿದೆ ಎನ್ನುವುದನ್ನು ಕಂಡುಹಿಡಿದು ತಿಳಿಸುತ್ತಾರೆ. ಹಾಗೂ ಆ ದೋಷವನ್ನು ನಿವಾರಿಸಿಕೊಳ್ಳಲು ಸೂಕ್ತ ಸಲಹೆಯನ್ನೂ ನೀಡುತ್ತಾರೆ; ಅಲ್ಲದೆ ಮುಂದೆ ಉಂಟಾಗಬಹುದಾದ ಅನಾಹುತಗಳನ್ನು ತಡೆಯಲು ತೆಗೆದುಕೊಳ್ಳಬೇಕಾದ ತುರ್ತುಕ್ರಮಗಳನ್ನು ಕೂಡ ಅವರು ಸೂಚಿಸುತ್ತಾರೆ.

(**ಮುಂದಿನ ತಿಂಗಳು** – ಮತ್ತಷ್ಟು ಸಲಹೆಗಳು)

# ಬಂಗಾಳದಲ್ಲಿ ದುರ್ಗಾಪೂಜೆ

ಕುಮಾರಿ ಪಿ. ಉಷಾ



**ಬೆ**ಳಗಿನ ಜಾವ. ಮತ್ಸ್ಯರಾಣಿಯಾದ ಸಿಗಡಿಯು ಸರೋವರದಲ್ಲಿ ಅರಳಿದ ಕಮಲದೆಲೆಯೊಂದರ ಮೇಲೆ ಕುಳಿತು ಎಳೆಬಿಸಿಲನ್ನು ಆಸ್ವಾದಿಸುತ್ತಿತ್ತು. ಅಷ್ಟರಲ್ಲೇ ಎಲ್ಲಿಂದಲೋ ಒಂದು ಕಾಗೆಯು ಬಂದು ಸಮೀಪದ ಮರದ ರೆಂಬೆಯ ಮೇಲೆ ಕುಳಿತಾಗ ಸುಂದರಿ ಸಿಗಡಿರಾಣಿಯ ಮೇಲೆ ಅದರ ದೃಷ್ಟಿ ಬಿತ್ತು. ಕೂಡಲೆ ಅದು, “ಕಾ, ಕಾ” ಎನ್ನುತ್ತ “ಎಲೈ ಸಿಗಡಿ, ನೋಡಿಲ್ಲಿ. ನಾನೀಗ ನಿನ್ನನ್ನು ಕಬಳಿಸುತ್ತೇನೆ” ಎಂದು ಕರ್ಕಶ ಧ್ವನಿಯಲ್ಲಿ ಕೂಗಿ ಹೇಳಿತು. ಕಾಗೆಯ ಅಸಹ್ಯವಾದ ವ್ಯವಹಾರದಿಂದ ಅಪಮಾನಗೊಂಡ ಸಿಗಡಿರಾಣಿಯು ಮುಖ ತಿರುಗಿಸಿಕೊಂಡಾಗಲೂ ಅದನ್ನು ಲೆಕ್ಕಿಸದೆ ಕಾಗೆಯು ಮತ್ತೆ, “ಕೇಳಿಸಿತಾ, ಸಿಗಡಿ? ನಿನ್ನನ್ನು ಈಗಲೇ ನುಂಗಿಬಿಡುವೆ” ಎಂದು ಕೂಗುತ್ತ ಅದರ ಹತ್ತಿರ ಹಾರಿಬರುತ್ತಿದ್ದಂತೆಯೇ ಸಿಗಡಿರಾಣಿಯು ಬುಳುಕ್ಕೆಂದು ನೀರಿನೊಳಗೆ ಜಿಗಿಯಿತು. ಬಳಿಕ ಮೀನುಗಳ ದರಬಾರಿನಲ್ಲಿ ತನಗೊದಗಿಬಂದ ವಿಪತ್ತಿನ ಬಗ್ಗೆ ವಿವರಿಸಿದಾಗ ಮೀನಿನ ಗುಂಪು ಸ್ತಬ್ಧವಾಗಿ ನಿಂತಿತು. ಚೇತರಿಸಿಕೊಂಡ ಮೀನೊಂದು ನಿಧಾನವಾಗಿ ಹೀಗೆ ಹೇಳಿತು: “ತಾಯಿ, ಈ ಸಂದರ್ಭದಲ್ಲಿ ನಾವೇನೂ ಮಾಡಲಾರೆವು. ನಾವು ನೀರಿನಲ್ಲಿ ಈಜುವ ಕ್ಷುದ್ರ ಮೀನುಗಳು. ಕಾಗೆಯಾದರೋ ಆಕಾಶದಲ್ಲಿ ಹಾರಾಡುವ ಪಕ್ಷಿ. ಅದರ ಚೂಪಾದ ಕೊಕ್ಕು ಹಾಗೂ ಮೊನಚಾದ ಉಗುರುಗಳನ್ನು ನಾವು ಎದುರಿಸುವುದಾದರೂ ಹೇಗೆ? ನಮ್ಮನ್ನು ಕ್ಷಮಿಸಿ.” ಅನಂತರ ಮೀನುಗಳೆಲ್ಲ ಹೊರಟುಹೋದವು. ನಿರಾಶೆಗೊಂಡ ಭಯಗ್ರಸ್ಥ ಸಿಗಡಿಯು ಬೇರೇನೂ ಉಪಾಯ ಕಾಣದೆ ಯೋಚನಾಮಗ್ನವಾಗಿ ನೀರಿನಲ್ಲಿ ಈಜುತ್ತ ಹೋಯಿತು. ಅನೇಕ ದಿನಗಳ ಬಳಿಕ, ತನ್ನತ್ತ ತೇಲಿಬರುತ್ತಿದ್ದ ಒಣಗಿದ ಮರದ ಕೊಂಬೆಯ ಮೇಲೆ ತನ್ನ ಅಣ್ಣನಾದ ಏಡಿಯನ್ನು ಕಂಡಾಗ ಅದಕ್ಕಾದ ಆನಂದ ಅಷ್ಟಿಷ್ಟಲ್ಲ. ಈಗ ಮತ್ಸ್ಯರಾಣಿಯಾದ ಸಿಗಡಿಯು ತನ್ನ ಸಮಸ್ಯೆ ಹಾಗೂ ಕಾಗೆಯಿಂದ ತನಗಾದ ಅಪಮಾನವನ್ನು ತನ್ನಣ್ಣನ ಬಳಿ ತೋಡಿಕೊಳ್ಳುತ್ತ ತನ್ನನ್ನು ಹೇಗಾದರೂ ಕಷ್ಟದಿಂದ ಪಾರುಮಾಡಬೇಕೆಂದು ಪ್ರಾರ್ಥಿಸಿಕೊಂಡಿತು. ಅಣ್ಣ ಏಡಿಯು ತಂಗಿಯ ರಕ್ಷಣೆಯು ತನ್ನ ಧರ್ಮವೆಂದು ಬಗೆದು ಆಶ್ವಾಸನೆ ನೀಡಿತು. ಕೆಲದಿನಗಳ ಬಳಿಕ ಸಿಗಡಿರಾಣಿಯು ಮತ್ತೆ ಮುಂಚಿನಂತೆ ಕಮಲಪತ್ರದ ಮೇಲೆ ಕುಳಿತಿರುವುದನ್ನು ಕಂಡ ಕಾಗೆಯು ಅದರ ಬಳಿ ಹಾರಿಬಂದು, “ಏಯ್, ಸಿಗಡಿ, ಇಷ್ಟು ದಿನ ಎಲ್ಲಿ ಹೋಗಿದ್ದೆ? ಇರು. ನಿನ್ನನ್ನೀಗಲೇ ಕಬಳಿಸುವೆ” ಎನ್ನುವಷ್ಟರಲ್ಲಿ, ಹತ್ತಿರದ ಕೆಸುವಿನ ಎಲೆಯ ಮರೆಯಲ್ಲಿ ಅವಿತುಕೊಂಡಿದ್ದ ಏಡಿಯು ತನ್ನ ದೃಢವಾದ ಮತ್ತು ಬಲಿಷ್ಠವಾದ ಕೊಂಡಿಗಳಿಂದ ದುಷ್ಟ ಕಾಗೆಯ ಕಾಲನ್ನೂ, ಕತ್ತನ್ನೂ ಹಿಡಿಯಿತು! ಎಷ್ಟೇ ಹೋರಾಡಿದರೂ ಕಾಗೆಗೆ ಅದರ ಹಿಡಿತದಿಂದ ತಪ್ಪಿಸಿಕೊಳ್ಳಲಾಗದೆ, ಅದು ಸತ್ತುಹೋಯಿತು. ಸರೋವರದ ಮೀನುಗಳು ಏಡಿಯನ್ನು ಕೊಂಡಾಡಿದವು. ಸಿಗಡಿರಾಣಿ ಆನಂದದಿಂದ ನರ್ತಿಸಿತು. ಹೀಗೆ ದುರ್ಬಲರ ಮೇಲೆ ಪ್ರಬಲರ ದಬ್ಬಾಳಿಕೆ, ಅತ್ಯಾಚಾರಗಳು ನಡೆದಾಗಲೆಲ್ಲ ದುರ್ಬಲರು ಪ್ರಬಲರ ದುಷ್ಟತನದಿಂದ ಪಾರಾಗಲು ಹಾಗೂ ತಮ್ಮ ಆತ್ಮರಕ್ಷಣೆಯನ್ನು ಮಾಡಿಕೊಳ್ಳಲು ಅವರಿಗಿಂತಲೂ ಬಲಿಷ್ಠರಾದವರ ಸಹಾಯವನ್ನು ಕೋರುತ್ತಾರೆ. ಅದೇ ರೀತಿ ನಮ್ಮೊಳಗೆ ತಾಂಡವವಾಡುತ್ತಿರುವ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ ಎಂಬ ಆರು ಶತ್ರುಗಳ ನಿರ್ಮೂಲನೆ ಕೂಡ ಭಗವದ್ಭಕ್ತಿಯಿಂದ ಮಾತ್ರವೇ ಸಾಧ್ಯ. ಇದು ಚಿರಂತನ ಸತ್ಯ. ಇದಕ್ಕೆ ಸಿಗಡಿರಾಣಿಯ ಕತೆಯು ಮಕ್ಕಳ ಮನಸ್ಸನ್ನು ಸೆಳೆಯುವ ಒಂದು ದೃಷ್ಟಾಂತವಷ್ಟೇ.

ಹಿಂದೆ ಸಮುದ್ರಕ್ರೀಡೆಯಲ್ಲಿ ತೊಡಗಿದ್ದ ಬಲಿಷ್ಠ ಗಜರಾಜನು ಅತಿ ಬಲಿಷ್ಠ ಮೊಸಳೆಯ ಹಿಡಿತದಿಂದ ಪಾರಾಗಲು ವ್ಯಾಕುಲಚಿತ್ತನಾಗಿ ಹರಿಯ ಸ್ಮರಣೆಯನ್ನು ಮಾಡಿದನು. ಆಗ ಶಂಖ–ಚಕ್ರ–ಗದಾಪದ್ಮಧಾರಿಯಾದ ಶ್ರೀಹರಿಯು ಗರುಡಾರೂಢನಾಗಿ ಬಂದು ಗಜರಾಜನನ್ನು ಉದ್ಧರಿಸಿದನು. ಈ ಪುರಾಣಕಥೆಯು ಎಲ್ಲರಿಗೂ ಗೊತ್ತು. ಅದೇ ರೀತಿ ದೈತ್ಯನಾದ ಮಹಿಷಾಸುರನು ದೇವತೆಗಳನ್ನು ಪೀಡಿಸಿದಾಗ ತ್ರಿಮೂರ್ತಿಗಳಾದ

**ನವರಾತ್ರಿಯ ಕಾಲದಲ್ಲಿ ಬಂಗಾಳ ಪ್ರದೇಶದಲ್ಲಿ ಮೂರು ದಿನಗಳ ಕಾಲ ದುರ್ಗಾ ಪೂಜೆಯನ್ನು ಸಂಭ್ರಮದಿಂದ ಆಚರಿಸುತ್ತಾರೆ. ಶಕ್ತಿಪೂಜೆಗೆ ಪ್ರಾಶಸ್ತ್ಯವಿರುವ ಈ ಸಂಪ್ರದಾಯದ ಹಿನ್ನೆಲೆ ಮತ್ತು ಆಚರಣೆಗಳ ಮಹತ್ವವನ್ನು ವಿವರವಾಗಿ ತಿಳಿಸಿಕೊಟ್ಟಿರುವ ಲೇಖಕಿ, ವಾರಾಣಸಿಯ ರಾಮಕೃಷ್ಣ ಮಿಷನ್ ಸೇವಾಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಹಲವು ಲೇಖನಗಳು ಈ ಪತ್ರಿಕೆಯಲ್ಲಿ ಈಗಾಗಲೇ ಪ್ರಕಟವಾಗಿವೆ.**

ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರ ಶಕ್ತಿಯೂ ಆತನನ್ನು ಸಂಹರಿಸಲು ಸಮರ್ಥವಾಗಲಿಲ್ಲ. ಆಗ ಆ ತ್ರಿಮೂರ್ತಿಗಳೂ ಸೇರಿ ಎಲ್ಲ ದೇವತೆಗಳೂ, **'ತ್ರಾಹಿ ದುರ್ಗಾ, ತ್ರಾಹಿ ದುರ್ಗಾ'** ಎನ್ನುತ್ತ ಶ್ರೀದುರ್ಗಾಮಾತೆಗೆ ಶರಣಾದರು. ಆಗ ಶಿವಶಕ್ತಿಯೂ ಸಿಂಹವಾಹಿನಿಯೂ ದಶಭುಜಧಾರಿಣಿಯೂ ಆದ ದುರ್ಗೆಯು ಎಲ್ಲಾ ದೇವತೆಗಳು ನೀಡಿದ ಶಸ್ತ್ರಾಸ್ತ್ರಗಳನ್ನು ಪಡೆದುಕೊಂಡು, ಭಯಾನಕವಾದ ಯುದ್ಧದಲ್ಲಿ ಮಹಿಷಾಸುರನನ್ನು ಸಂಹರಿಸಿದಳು. ಈ ಕಥನವನ್ನು ಮಾರ್ಕಂಡೇಯ ಪುರಾಣದಲ್ಲಿ ಅಂತರ್ಗತವಾದ ಶ್ರೀ ಶ್ರೀ ಚಂಡೀ (ದೇವೀ ಮಾಹಾತ್ಮ್ಯೆ ಅಥವಾ ದುರ್ಗಾ ಸಪ್ತಶತಿ) ಗ್ರಂಥದಲ್ಲಿ ಸುದೀರ್ಘವಾಗಿ ವಿವರಿಸಲಾಗಿದೆ.

ಈ ದುರ್ಗಾದೇವಿ ನಿಜವಾಗಿಯೂ ಯಾರು? ವೇದ ಪುರಾಣಗಳು ಸಾರುವಂತೆ ಆದಿಶಕ್ತಿಯ ಸಹಾಯದಿಂದಲೇ ಬ್ರಹ್ಮನು ಸೃಷ್ಟಿಕಾರ್ಯವನ್ನು ಮಾಡುತ್ತಾನೆ; ವಿಷ್ಣುವು ಜಗತ್ತಿನ ಪರಿಪಾಲನೆಯನ್ನು ಮಾಡುತ್ತಾನೆ; ಮಹೇಶ್ವರನು ಪ್ರಳಯ ಕಾಲದಲ್ಲಿ ಜಗತ್ತನ್ನು ಲಯಗೊಳಿಸುತ್ತಾನೆ. ಆದ್ದರಿಂದ ನಿಜವಾಗಿ ನೋಡಿದರೆ, ಈ ಶಕ್ತಿಯೇ ಸೃಷ್ಟಿ-ಸ್ಥಿತಿ-ಲಯಕರ್ತ್ರಿಯಾಗಿದ್ದಾಳೆ. ಈಕೆಯೇ ಜ್ಞಾನಶಕ್ತಿ, ಕ್ರಿಯಾಶಕ್ತಿ ಮತ್ತು ಇಚ್ಛಾಶಕ್ತಿಸ್ವರೂಪಿಣಿಯೂ ಆಗಿದ್ದಾಳೆ. ಅದಲ್ಲದೆ ಆಕೆ ಶುದ್ಧ ಚೈತನ್ಯರೂಪಿಣಿಯೂ ಹೌದು.

**'ದುರ್ಗ'** ಪದಕ್ಕೆ ಹಲವು ಅರ್ಥಗಳಿವೆ. ಅವುಗಳಲ್ಲಿ ಕೆಲವು ಹೀಗಿವೆ: ದೈತ್ಯ, ಮಹಾವಿಘ್ನ, ಸಂಸಾರಬಂಧನಕ್ಕೆ ಈಡುಮಾಡುವ ಕರ್ಮ, ದುಃಖ ಅಥವಾ ಶೋಕ, ನರಕ, ಯಮದಂಡ, ಜನ್ಮ, ಮೃತ್ಯು, ಮಹಾರೋಗ. **'ಆ'** ಎಂಬುದು ಹಂತೃಸೂಚಕ (ಕೊಲ್ಲುವ, ನಾಶಪಡಿಸುವ ಸೂಚಕ). ಹೀಗೆ ಯಾವ ದೇವಿಯು ಮೇಲಿನದೆಲ್ಲವನ್ನೂ ಹನನಗೊಳಿಸುವಳೋ, ನಾಶಗೊಳಿಸುವಳೋ, ನಿವಾರಣೆ ಮಾಡುವಳೋ ಅವಳೇ **'ದುರ್ಗಾ'**. ಯಾರ ಸ್ಮರಣಮಾತ್ರದಿಂದ ದುರ್ಗಮವಾದ ಶತ್ರುಗಳು ಮತ್ತು ಸಂಕಷ್ಟಗಳಿಂದ ಇಂದ್ರಾದಿದೇವತೆಗಳು ರಕ್ಷಿಸಲ್ಪಟ್ಟರೋ, ಆಕೆಯೇ ದುರ್ಗಾ. ಅವಳೇ ನಮ್ಮನ್ನೂ ಇದೇ ರೀತಿಯಾಗಿ ಎಲ್ಲ ಕಷ್ಟಗಳಿಂದಲೂ ರಕ್ಷಿಸುತ್ತಾಳೆ. ಅಲ್ಲದೆ, ದುರ್ಗನೆಂಬ ಮಹಾಸುರನನ್ನು ಕೊಂದು ವಿಖ್ಯಾತಳಾದವಳು ದುರ್ಗಾ.

ಈ ಬಗ್ಗೆ ಆಕೆಯೇ ಹೀಗೆ ಹೇಳಿಕೊಳ್ಳುತ್ತಾಳೆ : **'ಏಕೈವಾಹಂ ಜಗತ್ಯತ್ರ ದ್ವಿತೀಯಾ ಕಾ ಮಮಾಪರಾ'** - "ಈ ಜಗತ್ತಿನಲ್ಲಿ ಇರುವ ಶಕ್ತಿ ನಾನೊಬ್ಬಳೇ, ನನ್ನನ್ನು ಬಿಟ್ಟು ಎರಡನೆಯ ಶಕ್ತಿಸ್ವರೂಪಿಣಿ ಯಾರು ತಾನೇ ಇದ್ದಾಳೆ?" ದೇವೀಸೂಕ್ತದಲ್ಲಿ ದೇವಿಯ ತತ್ತ್ವವನ್ನು ಬಣ್ಣಿಸಲಾಗಿದೆ. ಆಕೆಯ ದಶಭುಜಗಳು ಹತ್ತು ದಿಕ್ಕುಗಳನ್ನು ಸೂಚಿಸುತ್ತವೆ. ಇವು ಆಕೆಯ ಅನಂತತೆ, ಸರ್ವವ್ಯಾಪಕತ್ವ ಹಾಗೂ ಸರ್ವಶಕ್ತಿಯ ಪ್ರತೀಕವಾಗಿವೆ. ಹೀಗೆ ಯಾವುದಕ್ಕೆ ಮಿಗಿಲಾದುದು ಈ ಬ್ರಹ್ಮಾಂಡದಲ್ಲಿಯೇ ಬೇರೊಂದು ಇಲ್ಲವೋ ಅದೇ ದುರ್ಗಾತತ್ತ್ವ.

ಸಮಸ್ತ ಭರತಖಂಡದಲ್ಲಿ ದೇವೀಪೂಜೆಯ ಆಚರಣೆಯು ಯುಗಯುಗಾಂತರಗಳಿಂದ ನಡೆದುಕೊಂಡುಬಂದಿದೆ. ತ್ರೇತಾ ಯುಗದಲ್ಲಿ ಸೀತೆಯನ್ನು ಕಳೆದುಕೊಂಡ ಶ್ರೀರಾಮಚಂದ್ರನು ರಾವಣನೊಡನೆ ಯುದ್ಧಮಾಡುವ ಮುನ್ನ, ದೇವರ್ಷಿ ನಾರದರ ಉಪದೇಶದಂತೆ, ಶ್ರೀದುರ್ಗಾಪೂಜೆಯನ್ನು ಮಾಡಿ, ವಿಜಯಿಯಾದನು. ಹಾಗೆಯೇ ದ್ವಾಪರಯುಗದಲ್ಲಿ ಶ್ರೀಕೃಷ್ಣನು ಬೋಧಿಸಿದಂತೆ ಅರ್ಜುನನು ದುರ್ಗೆಯನ್ನು ಪೂಜಿಸಿ, ಕುರುಕ್ಷೇತ್ರ ಯುದ್ಧವನ್ನು ಗೆದ್ದನು. ಅಂದಿನಿಂದಲೂ ತಮಗೆ ಒದಗಿಬರುವ ಕಷ್ಟಗಳಿಂದ ಪಾರಾಗಲು ಜನರು ತಾಯಿ ದುರ್ಗೆಗೆ ಮೊರೆ ಹೋಗುತ್ತಿರುವರು.

ದುರ್ಗಾಪೂಜೆಯಲ್ಲಿ ಕಾಲಮಾನದ ಪ್ರಕಾರ ಎರಡು ಬಗೆಗಳಿವೆ: **೧. ವಸಂತಕಾಲದ ಪೂಜೆ ; ೨. ಶರತ್ಕಾಲದ ಪೂಜೆ.** ಈ ಎರಡೂ ಕಾಲಗಳಲ್ಲಿ ಜನರು ಶ್ರೀದುರ್ಗಾ ನವರಾತ್ರಿ ವ್ರತವನ್ನು ಕೈಗೊಳ್ಳುವರು. ಇದಕ್ಕೆ ಕಾರಣ, ಈ ಎರಡೂ ಋತುಮಾನಗಳಲ್ಲಿ ಜೀವಿಗಳು ಬಹಳ ಕಷ್ಟಗಳಿಗೆ ಒಳಗಾಗುತ್ತಾರೆ; ದುಃಖಗಳಿಗೆ ಈಡಾಗುತ್ತಾರೆ. ಈ ಸಮಯದಲ್ಲಿ ಅನೇಕ ರೀತಿಯ ರೋಗ-ರುಜಿನಗಳೂ ಜನರಿಗೆ ಹೆಚ್ಚಾಗಿ ಉಂಟಾಗುತ್ತವೆ. ಆದ್ದರಿಂದ ಈ ಎರಡು ಋತುಗಳ ಕಾಲವನ್ನು 'ಯಮದಂಷ್ಟ್ರಾ' ಎಂದೇ ಕರೆಯುತ್ತಾರೆ. ಇಂಥ ಕಷ್ಟಗಳ ವಿರುದ್ಧ ಜಯಹೊಂದಲು ಚೈತ್ರ ಹಾಗೂ ಆಶ್ವಯುಜ ಮಾಸಗಳಲ್ಲಿ ಜನರು ಭಕ್ತಿಪೂರ್ವಕವಾಗಿ ದುರ್ಗಾದೇವಿಯನ್ನು ಆರಾಧಿಸುತ್ತಾರೆ.

ಬಂಗಾಳದಲ್ಲಿ ಶರತ್ಕಾಲದ ದುರ್ಗಾಪೂಜೆಯು ಸುಪ್ರಸಿದ್ಧ ವಾದುದು. ಇದನ್ನು ಶಾರದೀಯ ದುರ್ಗಾಪೂಜೆಯೆಂದೂ ಕರೆಯುತ್ತಾರೆ. ಗುಪ್ತರ ಆಳ್ವಿಕೆಯಲ್ಲಿ ಈ ಪೂಜೆಯು ವಂಗದೇಶದಲ್ಲಿ ಆಚರಣೆಗೆ ಬಂದಿತು ಎನ್ನುತ್ತಾರೆ. ಆದರೂ, ಈಗಿನ ಕಾಲದಲ್ಲಿ ಪ್ರಸಿದ್ಧಿಯಿರುವ ಸಪರಿವಾರ ದುರ್ಗಾಪೂಜೆಯು ಪ್ರಾರಂಭಗೊಂಡದ್ದು ಕ್ರಿಸ್ತಶಕ ಹದಿನಾಲ್ಕನೆಯ ಶತಮಾನದಲ್ಲಿ ಎನ್ನಬಹುದು. ಈ ಪೂಜೆಯಲ್ಲಿ ದುರ್ಗಾದೇವಿಯನ್ನು ಘಟ ಪಟಗಳಲ್ಲಾಗಲಿ, ಮಣ್ಣಿನ ವಿಗ್ರಹಗಳಲ್ಲಾಗಲಿ ಆವಾಹಿಸಿ ಭಕ್ತರು ಪೂಜಿಸುತ್ತಾರೆ; ಆ ಮೂಲಕ ತಮ್ಮ ಪ್ರೀತಿ-ಶ್ರದ್ಧೆಗಳನ್ನು ಅರ್ಪಿಸುತ್ತಾರೆ. ಈ ಪೂಜೆಯನ್ನು ವಂಗದೇಶದ ಸಾಂಸ್ಕೃತಿಕ, ಧಾರ್ಮಿಕ ಹಾಗೂ ಆಧ್ಯಾತ್ಮಿಕ ವಲಯಗಳಲ್ಲಿ ಅತ್ಯಂತ ಆನಂದ ಮತ್ತು ಸಂಭ್ರಮಗಳಿಂದ ಆಚರಿಸಲಾಗುತ್ತದೆ. ನಗರಗಳಲ್ಲಿ ಹಾಗೂ ಗ್ರಾಮಗಳಲ್ಲಿ ಈ ಹಬ್ಬವನ್ನು ಜನರು ತಮ್ಮ ತಮ್ಮ ಮನೆಗಳಲ್ಲಿ ಮಾತ್ರವಲ್ಲದೆ, ಪೆಂಡಾಲುಗಳಲ್ಲಿಯೂ ಸಾರ್ವಜನಿಕವಾಗಿ ಆಚರಿಸುತ್ತಾರೆ. ಅದಕ್ಕೆ ದೇಣಿಗೆಗಳನ್ನು ಸಂಗ್ರಹಿಸಿ, ವಿಶಾಲವೂ ವೈವಿಧ್ಯಮಯವೂ ಆದ ವಿನ್ಯಾಸಗಳನ್ನು ಒಳಗೊಂಡ ಬೃಹತ್ ಪೆಂಡಾಲುಗಳನ್ನು ನಿರ್ಮಿಸುತ್ತಾರೆ. ಧ್ವನಿವರ್ಧಕಗಳ ಮೂಲಕ ಸಂಗೀತ ಮೊಳಗುತ್ತಿರುತ್ತದೆ. ಚಿತ್ರವಿಚಿತ್ರ ದೀಪಾಲಂಕಾರಗಳಿಂದ ಪೆಂಡಾಲುಗಳು ಮತ್ತು ಇಡೀ ಬೀದಿಗಳು ಜಗಜಗಿಸುತ್ತಿರುತ್ತವೆ. ಹೀಗೆ ವಿಜೃಂಭಣೆಯಿಂದ ಎಲ್ಲೆಲ್ಲೂ ದುರ್ಗಾಪೂಜೆಯು ನಡೆಯುತ್ತದೆ. ಕೆಲವು ಅತಿ ಕುಗ್ರಾಮಗಳಲ್ಲಿ ದೇವಿಯ ಪ್ರತಿಮೆಯ ಬದಲಾಗಿ ಬರಿಯ ಕಲಶ ಇಲ್ಲವೇ ಘಟದಲ್ಲಿ ದೇವಿಯನ್ನು ಆವಾಹನೆ ಮಾಡಿ ಪೂಜಿಸುತ್ತಾರೆ. ರಾಮಕೃಷ್ಣ ಮಹಾಸಂಘದ ಪ್ರಧಾನಕೇಂದ್ರವಾದ ಬೇಲೂರು ಮಠದಲ್ಲಿ, ೧೯೦೧ನೆಯ ಇಸವಿಯಿಂದ ವಿಧಿಪೂರ್ವಕವಾಗಿ ದುರ್ಗಾಪೂಜೆಯನ್ನು ಆಚರಿಸುವ ಪರಿಪಾಠ ಬೆಳೆದುಬಂದಿದೆ. ಇದರ ಶುಭಾರಂಭವನ್ನು

ಮಾಡಿದವರು ಪೂಜ್ಯ ಸ್ವಾಮಿ ವಿವೇಕಾನಂದರೇ ಎನ್ನುವುದು ಗಮನಾರ್ಹ. ಮೊದಲ ವರ್ಷದ ಪೂಜೆಯನ್ನು ಶ್ರೀಮಾತೆ ಶಾರದಾದೇವಿಯವರ ಹೆಸರಿನಲ್ಲಿಯೇ ನಡೆಸಲಾಯಿತು ಎನ್ನುವುದೂ ಇನ್ನೊಂದು ವಿಶೇಷ.

ರಾಮನು ರಾವಣನ ಜೊತೆಗೆ ಯುದ್ಧ ಮಾಡಿದ. ಅದಕ್ಕೆ ಮುನ್ನ ಆ ಯುದ್ಧದಲ್ಲಿ ಜಯಗಳಿಸಲು ದುರ್ಗಾಪೂಜೆಯನ್ನು ಮಾಡಿದ. ಈ ಪೂಜೆಯಲ್ಲಿ ಹತ್ತು ಭುಜಗಳುಳ್ಳ ಸಿಂಹವಾಹಿನಿ ದುರ್ಗೆಯ ಮಣ್ಣಿನ ಮೂರ್ತಿಯನ್ನು ಪೂಜಿಸಿದ. ಪೂಜೆಯನ್ನು ಸ್ವೀಕರಿಸುವುದಕ್ಕಾಗಿ ಸ್ವತಃ ಬ್ರಹ್ಮದೇವನೇ ಅಕಾಲದಲ್ಲಿ ದೇವಿಯನ್ನು ನಿದ್ರೆಯಿಂದ ಎಚ್ಚರಿಸಿದ ಎಂದು ದೇವೀಭಾಗವತ ಹೇಳುತ್ತದೆ. ಉತ್ತರಾಯಣ ಕಾಲವು ದೇವದೇವತೆಗಳಿಗೆ ಹಗಲಿನ ವೇಳೆ. ಆಗ ಅವರು ಎಚ್ಚೆತ್ತಿರುತ್ತಾರೆ. ದಕ್ಷಿಣಾಯನದಲ್ಲಿ ಅವರು ನಿದ್ರಿಸಿರುತ್ತಾರೆ. ಆಗ ನಡೆಯುವ ಪೂಜೆಯನ್ನು ಸ್ವೀಕರಿಸಲು ದೇವಿಯನ್ನು ಎಚ್ಚರಿಸಬೇಕಾಗುತ್ತದೆ. ಇದನ್ನೇ 'ಅಕಾಲ ಬೋಧನ' ಎನ್ನುತ್ತಾರೆ. ಭಗವಾನ್ ಶ್ರೀರಾಮಚಂದ್ರನ ಸಲುವಾಗಿ ಬ್ರಹ್ಮನು ದೇವಿಯನ್ನು ಜಾಗೃತಗೊಳಿಸಿದ ಸಂಕೇತವಾಗಿ, ಶಾರದೀಯ ದುರ್ಗಾಪೂಜೆಯಲ್ಲಿ ಷಷ್ಠಿಯ ದಿನದಂದು 'ಬೋಧನ'ವನ್ನು ವಿಧಿಯುಕ್ತವಾಗಿ ಕೈಗೊಳ್ಳುವುದು ಒಂದು ಸಂಪ್ರದಾಯವಾಗಿಬಿಟ್ಟಿದೆ.

ಸುಖವಾಗಲಿ ಸಂಕಟವಾಗಲಿ ಎಲ್ಲದರಲ್ಲೂ ಜಗನ್ಮಾತೆಯೇ ನಮಗೆ ಆಪ್ತಳು. ಜೀವನ ಸಂಗ್ರಾಮದ ನಡುವೆ ಬರುವ ದುಃಖ, ವ್ಯಾಧಿ ಮತ್ತು ಮೃತ್ಯುಗಳನ್ನು ಎದುರಿಸಬೇಕಾದ ಸಮಯದಲ್ಲಿ ನಾವು ಕರೆಯಬಹುದಾದ ಏಕೈಕ ಆಶ್ರಯದಾತಳೆಂದರೆ ಜಗನ್ಮಾತೆಯೇ.

ಸೋಜಿಗವೆಂದರೆ ಈ ದೇವಿಯು ಭುವನೇಶ್ವರಿ ಮತ್ತು ಜಗಜ್ಜನನಿ ಆಗಿದ್ದರೂ, ಬಂಗಾಳಿ ಜನಗಳಿಗೆ ಆಕೆ ತಮ್ಮ ಪ್ರೀತಿಯ ಮಗಳೂ ಹೌದು. ಆಕೆಯ ಪತಿಯಾದರೋ ಶ್ಮಶಾನವಾಸಿಯಾದ ತಿರುಕ ಶಿವ. ಪತಿಗೃಹದಲ್ಲಿ ಅವಳಿಗೆ ಅದೆಷ್ಟು ಕಷ್ಟವೋ ಎಂದು ತಾಯಿಗೆ ಕಳವಳ. ನಾಲ್ಕು ದಿನಗಳ ಮಟ್ಟಿಗಾದರೂ ಅವಳನ್ನು ತವರಿಗೆ ಕರೆತಂದು ಸತ್ಕರಿಸಬೇಕು ಎಂಬ ಭಾವನೆಯಿಂದ ವಂಗದೇಶದ ಜನರು ಮಹಾಲಯ ಅಮಾವಾಸ್ಯೆಯ ಬಹುಳ ಪಾಡ್ಯದಿಂದ ಹಿಡಿದು ಪಂಚಮಿಯವರೆಗೆ 'ಆಗಮನೀ' ಸಂಗೀತ ಹಾಡುವುದನ್ನು ಪದ್ಧತಿಯಾಗಿ ಇಟ್ಟುಕೊಂಡಿದ್ದಾರೆ. ಉಮೆಯ ತಾಯಿಯು ತನಗೆ ತಾನೇ ಹೇಳಿಕೊಂಡಂತೆ ಇರುವ ಈ ಹಾಡು ಹೀಗೆ ಆರಂಭವಾಗುತ್ತದೆ:

**"ಈ ಸಲ ಉಮೆಯು ತವರಿಗೆ ಬಂದರೆ ಆಕೆಯನ್ನು ಮತ್ತೆ ಪತಿಗೃಹಕ್ಕೆ ಕಳಿಸೆನು... ಜನರು ಅದೆಷ್ಟೇ ನನ್ನನ್ನು ದೂಷಿಸಲಿ, ಅವರ ಮಾತಿಗೆ ಕಿವಿಗೊಡೆನು..."**

ಈ ಬಗೆಯ ಭಾವನಾತ್ಮಕ ಹಾಡುಗಳನ್ನು ಹಾಡುವುದು ವಾಡಿಕೆಯಾಗಿ ಬಂದಿದೆ. ಇದಲ್ಲದೆ, ಈ ದೇವೀಪಕ್ಷದಲ್ಲಿ ಸಂಪ್ರದಾಯಸ್ಥರು ಬೆಳಗ್ಗೆ ಶ್ರೀ ಶ್ರೀ ಚಂಡೀ (ದುರ್ಗಾಸಪ್ತಶತಿ) ಪಾರಾಯಣವನ್ನು ಮಾಡುವುದು ಕೂಡ ಪದ್ಧತಿ.

ನಾಜೂಕು ವಿನ್ಯಾಸದ ವಸ್ತ್ರಾಭರಣಗಳಿಂದ ಸಾಲಂಕೃತವಾದ ಶ್ರೀ ಶ್ರೀ ಮಹಿಷಾಸುರಮರ್ದಿನಿಯ ಬೃಹತ್ ಪ್ರತಿಮೆಯು ಮಣ್ಣಿನದ್ದು. ಅದರ ಹೃದಯಭಾಗವನ್ನು ಅನೇಕ ವೈದಿಕ ಮತ್ತು ಪೌರಾಣಿಕ ಮಂತ್ರಗಳಿಂದ ದುರ್ವೆ ಹುಲ್ಲಿನಿಂದ ಸ್ಪರ್ಶಮಾಡುತ್ತ, ಪ್ರಾಣಪ್ರತಿಷ್ಠಾಪನೆಯನ್ನು ಮಾಡುತ್ತಾರೆ. ಆಗ ನಿಜವಾಗಲೂ ದೇವಿಯು ಅದರಲ್ಲಿ ನೆಲೆಸಿದ್ದಾಳೆ ಎನ್ನುವ ರೀತಿಯಲ್ಲಿ ಜೀವಕಳೆ ಎದ್ದುಕಾಣುತ್ತದೆ. ಷಷ್ಠಿಯ ದಿವಸ ದುರ್ಗತಿನಾಶಿನಿಯಾದ ದುರ್ಗೆಯು ಸಪರಿವಾರವಾಗಿ, ಅಂದರೆ ತನ್ನ ಪರಿವಾರದವರಾದ ಲಕ್ಷ್ಮೀ, ಸರಸ್ವತಿ, ಗಣೇಶ ಹಾಗೂ ಕಾರ್ತಿಕೇಯರೊಂದಿಗೆ ತನ್ನ ತವರಿಗೆ ಬಂದ ರೀತಿಯಲ್ಲಿ, ಭಕ್ತರ ಮನೆಗೆ ಬರುತ್ತಾಳೆ ಎಂಬ ನಂಬಿಕೆ ಇದೆ. ಶಕ್ತಿಯ ಜೊತೆಯಲ್ಲಿರುವ ಲಕ್ಷ್ಮಿಯು ಐಶ್ವರ್ಯವನ್ನೂ, ಸರಸ್ವತಿಯು ವಿದ್ಯೆಯನ್ನೂ, ಗಣೇಶನು ಸಿದ್ಧಿಯನ್ನೂ ಹಾಗೂ ಕಾರ್ತಿಕೇಯನು ಶೌರ್ಯವನ್ನೂ ತರುತ್ತಾರೆ ಎಂಬ ವಿಶ್ವಾಸ ಭಕ್ತರಲ್ಲಿದೆ.

ಶಿವಪಾರ್ವತಿಯ ವಿವಾಹದ ಬಳಿಕ ಪ್ರತಿವರ್ಷವೂ ದೇವಿಯು ತನ್ನೆಲ್ಲ ಪರಿವಾರದವರೊಡನೆ ಸವಾಹನಾರೂಢಳಾಗಿ ಬಂದಾಗ ನಡೆಯುವ ಉತ್ಸವವೇ ದುರ್ಗೋತ್ಸವ. ಕಲಿಯುಗದಲ್ಲಿ ದುರ್ಗಾಪೂಜೆಯು ಅಶ್ವಮೇಧ ಯಜ್ಞಕ್ಕೆ ಸಮಾನವಾಗಿದೆ ಎಂದು ಹೇಳುವ ಪರಿಪಾಠ ಇದೆ. ಆದ್ದರಿಂದ ಈ ಪೂಜೆಯಲ್ಲಿ ಯಜ್ಞಪುರುಷನಾದ ನಾರಾಯಣನಿಗೆ ಪ್ರಥಮ ಪೂಜೆ ಸಲ್ಲುತ್ತದೆ. ಮಹಾದೇವನಾದ ಶಿವನು ವಿಜ್ಞಾನಮಯ ಪುರುಷನೂ, ಜ್ಞಾನ ರೂಪಿ ಗುರುವೂ ಆಗಿರುತ್ತಾನೆ. ಆದ್ದರಿಂದ ರುದ್ರದೇವನ ಪೂಜೆಯನ್ನೂ ಮಾಡಲಾಗುತ್ತದೆ. ಇವರೀರ್ವರ ಪೂಜೆಯ ಸಲುವಾಗಿ ನಾರಾಯಣ ಶಿಲೆ ಹಾಗೂ ಶಿವಲಿಂಗದ ಅರ್ಚನೆ ನಡೆಯುತ್ತದೆ. ಇದಾದನಂತರವೇ ದುರ್ಗಾಪೂಜೆಯು ವಿಧ್ಯುಕ್ತವಾಗಿ ಆರಂಭಗೊಳ್ಳುತ್ತದೆ.

ಉತ್ಸವದ ದಿನಗಳಂದು ಢೋಲು, ಭೇರಿವಾದ್ಯಗಳು ಮೊರೆಯುತ್ತವೆ. ಉತ್ಸವದ ಮೂರೂ ದಿವಸಗಳಂದು, ಅಂದರೆ ಮಹಾಸಪ್ತಮಿ, ಮಹಾಷ್ಟಮಿ ಮತ್ತು ಮಹಾನವಮಿಗಳಂದು ಶ್ರೀ ಶ್ರೀ ದೇವಿಗೆ ಷೋಡಶೋಪಚಾರ ಪೂಜೆಯ ಜರುಗುತ್ತದೆ. ಮಂತ್ರೋಚ್ಚಾರಣೆ, ಶ್ರೀ ಶ್ರೀ ಚಂಡೀ ಪಠಣ, ಮಹಿಷಾಸುರಮರ್ದಿನಿ ಸ್ತೋತ್ರ ಪಠಣಗಳಿಂದ ವಾತಾವರಣವು ಪವಿತ್ರಗೊಳ್ಳುತ್ತದೆ. ಎಲ್ಲೆಲ್ಲೂ ಆನಂದೋತ್ಸಾಹಗಳು ತುಳುಕಾಡುತ್ತವೆ. ವಿಧಿಯನುಸಾರವಾಗಿ ದುರ್ಗಾಪೂಜೆಯ ಸಮಯದಲ್ಲಿ ಹಿಂದೂಧರ್ಮದ ಸಕಲ ದೇವದೇವಿಯರಿಗೂ ಪೂಜೆ ಸಲ್ಲಲೇಬೇಕು. ಆದ್ದರಿಂದಲೇ ದುರ್ಗಾಪೂಜೆಯ ಕಮಾನಿನ ಮೇಲೆ ರಾಧೆ, ನಾರಸಿಂಹೀ, ಚಾಮುಂಡಿ, ಜಗದ್ಧಾತ್ರಿ, ಮಹೇಶ್ವರಿ, ಇಂದ್ರಾಣಿ, ಶ್ರೀರಾಮಚಂದ್ರ, ಬ್ರಹ್ಮ, ವಿಷ್ಣು, ಶಿವ, ಸೂರ್ಯ, ಚಂದ್ರ, ಪವನ, ಇಂದ್ರ ಮುಂತಾದ ದೇವದೇವಿಯರ ಚಿತ್ರಗಳು ಇರುತ್ತವೆ. ಇದನ್ನು 'ಜಾಲಚಿತ್ರ' ಎಂದು ಕರೆಯುತ್ತಾರೆ.

ಮಹಾಷ್ಟಮಿಯಂದು ಒಬ್ಬ ಸಣ್ಣ ವಯಸ್ಸಿನ ಹೆಣ್ಣುಮಗಳಿಗೆ ದೇವೀಭಾವದಿಂದ ಪೂಜೆ ಮಾಡುವ ಪದ್ಧತಿ ಇದೆ. ಇದನ್ನು 'ಕುಮಾರಿ ಪೂಜೆ' ಎಂದು ಕರೆಯುತ್ತಾರೆ. ಇದು ಬಹಳ ಪ್ರಚಲಿತವಾದ ಶಾಸ್ತ್ರೀಯ ಕ್ರಿಯೆ. ಸಾಮಾನ್ಯವಾಗಿ ೫ ರಿಂದ ೧೦